S.C. 99/2025.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 99/2025.

| | | | |
|---|---|---|---|
| ಹೆಸರು | : | ಮಾನಪ್ಪ ಐಹೊಳೆ | ಫ್ರಾಸಾ-02 |
| ತಂದೆಯ ಹೆಸರು | : | ನಿಂಗಪ್ಪ | ಚಾಸಾ-02 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಬೆನಕನವಾರಿ | |

ದಿನಾಂಕ: 09-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿ ಹಾಗೂ ಮೃತ ಮಧುಕುವಾರ ಪರಿಚಯ. ದಿನಾಂಕ: 22-07-2025 ರಂದು ಮಧ್ಯಾಹ್ನ 3.00 ರಿಂದ 4.00 ಗಂಟೆಗೆ ಅಮೀನಗಡ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಮಧುಕುಮಾರನ ಶವ ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿದ್ದಾರೆ. ಸದರಿ ಪಂಚನಾಮೆಯನ್ನು ನಿಪಿ-5 ಅಂತಾ, ಸಹಿಯನ್ನು ನಿಪಿ-5(ಎ) ಅಂತಾ ಗುರುತಿಸಲಾಯಿತು. ನಿಪಿ-1 ಮತ್ತು 2 ಫೋಟೋ ನೋಡಿ ಗುರುತಿಸಿದ್ದೇನೆ. ನನ್ನ ಜೊತೆ ಚಾಸಾ-3 ಇನ್ನೊಬ್ಬ ಪಂಚನಿದ್ದ. ಮೃತನ ಕುತ್ತಿಗೆ ಕೊಯ್ದು ಕೊಲೆಯಾಗಿತ್ತು.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಪಿ.ಹೆಚ್.ಎಮ್ ವಕೀಲರಿಂದ.**

ಆರೋಪಿ ಮತ್ತು ಚಾಸಾ-1 ರ ನಡುವೆ ಮೊದಲು ಯಾವುದೇ ಜಗಳವಿರಲಿಲ್ಲ. ಶವ ಪಂಚನಾಮೆ ಕಾಲದಲ್ಲಿ ಮೃತನ ಮೇಲೆ ಬಟ್ಟೆಗಳಿದ್ದವು, ಪಂಚನಾಮೆ ಮಾಡುವಾಗ ಅವುಗಳನ್ನು ತೆಗೆದರು. ಶವದ ಮೈಮೇಲೆ ಹಳದಿ ಬಣ್ಣದ ಉದ್ದತೋಳಿನ ಅಂಗಿ, ನೀಲಿ ಬಣ್ಣದ ಜೀನ್ಸ ಪ್ಯಾಂಟ್ ಇತ್ತು. ಶವವನ್ನು 12.30 ರಿಂದ 1.00 ಗಂಟೆ ಅವಧಿಯಲ್ಲಿ ಊರಿನಿಂದ ಅಮಿನಗಡ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು. ಚಾಸಾ-1 ನನ್ನ ಸಂಬಂಧಿಕ ಎನ್ನುವುದು ಸರಿಯಲ್ಲ. ಅವನು ನಮ್ಮೂರಿನವನು.

ಮೃತನ ಕುತ್ತಿಗೆಗೆ ಆದ ಗಾಯದ ಹೊರತುಪಡಿಸಿ ಬೇರೆ ಯಾವುದೇ ಗಾಯವಿರಲಿಲ್ಲ. ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿಲ್ಲ. ಅದನ್ನು ಯಾರು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಸ್ನೇಹಿತ ಇರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

09-01-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 99/2025.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆಃ 99/2025.

| | | | |
|---|---|---|---|
| ಹೆಸರು | : | ಮಾರುತಿ ವಾಲಿಕಾರ | ಫ್ರಾಸಾ-01 |
| ತಂದೆಯ ಹೆಸರು | : | ಫಕೀರಪ್ಪ | ಚಾಸಾ-01 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಬೆನಕನವಾರಿ | |

ದಿನಾಂಕಃ 09-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿ ನನ್ನ ಚಿಕ್ಕಪ್ಪನ ಮಗ. ಮೃತ ಮಧುಕುಮಾರ ನನ್ನ ಮಗ. ಚಾಸಾ-10 ನನ್ನ ತಂದೆ. ಚಾಸಾ-11 ನನ್ನ ಹೆಂಡತಿ. ಚಾಸಾ-12 ರಿಂದ 14 ನನ್ನ ಸಂಬಂಧಿಕರು. ನನಗೆ ವೀಣಾ ಮತ್ತು ಮಧುಕುಮಾರ ಎಂಬ 2 ಜನ ಮಕ್ಕಳು. ನಾನು, ನನ್ನ ಹೆಂಡತಿ, ಮಕ್ಕಳು ಹಾಗೂ ತಂದೆ-ತಾಯಿ ಒಟ್ಟಿಗೆ ವಾಸಿಸುತ್ತೇವೆ.

ದಿನಾಂಕಃ 22-07-2025 ರಂದು ಮಧುಕುಮಾರ 3 ವರ್ಷದವನಿದ್ದು ಅವನನ್ನು ನನ್ನ ತಂದೆಗೆ ಅಂಗನವಾಡಿಗೆ ಬೆಳಗ್ಗೆ 8.00 ಗಂಟೆಗೆ ಕರೆದುಕೊಂಡು ಹೋಗುವಾಗ ನಾನು ಹೊಲಕ್ಕೆ ಹೋಗಿದ್ದೆ. ಸುಮಾರು 8.30-9.00 ಗಂಟೆಗೆ ನನ್ನ ತಂದೆ ನನಗೆ ಫೋನ್ ಮಾಡಿ ಆರೋಪಿ ತನ್ನ ಮನೆಯಲ್ಲಿ ಮಧುಕುಮಾರನನ್ನು ಕೊಲೆ ಮಾಡಿದ್ದಾನೆ ಬಾ ಎಂದು ಹೇಳಿದ. ನಾನು 9.00 ಗಂಟೆಗೆ ಆರೋಪಿಯ ಮನೆಗೆ ಬಂದೆವು. ನನ್ನ ಕುಟುಂಬದವರು ಅಲ್ಲಿಯೇ ಇದ್ದರು. ಅವನ ಮನೆಗೆ ಹೋಗಿ ನೋಡಲಾಗಿ ಮಧುಕುಮಾರನ ಕುತ್ತಿಗೆ ಚಾಕುವೀನಿಂದ ಕತ್ತರಿಸಿತ್ತು, ಚಾಕು ಅಲ್ಲಿಯೇ ಬಿದ್ದಿತ್ತು. ಆರೋಪಿ ಮನೆಯ ಹೊರಗೆ ನಿಂತಿದ್ದ ಹಾಗೂ ಆರೋಪಿಯ ಮೈತುಂಬ ರಕ್ತವಾಗಿತ್ತು ಮತ್ತು ಮಧುಕುಮಾರನ ಕುತ್ತಿಗೆ ಕತ್ತರಿಸುವಾಗ ಅವನ ಎಡಗೈ ಕತ್ತರಿಸಿಕೊಂಡಿದ್ದ.

ಆರೋಪಿ ಯಾವ ವಿಷಯಕ್ಕೆ ಕೊಲೆ ಮಾಡಿದ್ದಾನೆ ಎಂದು ಹೇಳಲಿಲ್ಲ, ಆದರೆ ಠಾಣೆಯಲ್ಲಿ ಒಪ್ಪಿಕೊಂಡಿರುವುದೇನೆಂದರೆ ಅವನು ತನ್ನ ಹೆಂಡತಿ ಮೇಲೆ ಹಲ್ಲೆ ಮಾಡಿದ್ದು ಆಗ ಅವನ ಹೆಂಡತಿಯನ್ನು ಆಸ್ಪತ್ರೆಗೆ ದಾಖಲು ಮಾಡಿರುವುದರಿಂದ, ಆರೋಪಿಯ ಅಣ್ಣ ಮತ್ತು ಅಪ್ಪನಿಗೆ ಆರೋಪಿಯ ಕೈ ಕಾಲು ಕಟ್ಟಿ ಹಾಕಲು ಹೇಳಿದ್ದು ಆ ವಿಷಯದಲ್ಲಿ ನನ್ನ ಮಗನನ್ನು ಕೊಲೆ ಮಾಡಿದ್ದೇನೆ ಎಂದು ಒಪ್ಪಿಕೊಂಡಿದ್ದಾನೆ. ಈಗ 3 ಪೋಟೋಗಳನ್ನು ನೋಡುತ್ತಿದ್ದು ನಿಪಿ-1 ರಿಂದ 3 ಅಂತಾ ಗುರುತಿಸಲಾಯಿತು.

ನಂತರ ನಾನು ಪೊಲೀಸಠಾಣೆಗೆ ಹೋಗಿ ಆರೋಪಿಯ ಮೇಲೆ ಪಿರ್ಯಾದಿ ನೀಡಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು ಹಾಗೂ ಆರೋಪಿಯನ್ನು ಪೊಲೀಸಠಾಣೆಗೆ ನಾನೇ ಒಪ್ಪಿಸಿದ್ದೇನೆ. ಮೃತನ ಮೈಮೇಲಿನ ಬಟ್ಟೆ ಹಾಗೂ ಚಾಕು ನೋಡಿದಲ್ಲಿ ಗುರುತಿಸುತ್ತೇನೆ. ತನಿಖಾಧಿಕಾರಿ ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಗೆ ವೇಳೆ ಕೇಳಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

09-01-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.